**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕಡೂರು**

**ಸಿಸಿ. ನಂ.2236/2023**

ಫಿರ್ಯಾದಿ : **ಸಖರಾಯಪಟ್ಟಣ ಪೊಲೀಸ್ ಠಾಣೆ**

ವಿರುದ್ದ

ಆರೋಪಿತರು : **1. ಶ್ರೀ ಅಭಿಷ್ಷೇಕ್ ನಾಯ್ಕ,**
ಬಿನ್ ಶ್ರೀ ಗೋಪಾಲನಾಯ್ಕ,
ಸುಮಾರು 24 ವರ್ಷಗಳು,
ವಾಸಃ ಹೂವೇನಹಳ್ಳಿ ತಾಂಡ್ಯ,
ಸಖರಾಯಪಟ್ಟಣ ಹೋಬಳಿ,
ಕಡೂರು ತಾಲ್ಲೂಕು.

**2. ಶ್ರೀ ರವಿನಾಯ್ಕ,**
ಬಿನ್ ಶ್ರೀ ಸೋಮ್ಲಾನಾಯ್ಕ,
ಸುಮಾರು 33 ವರ್ಷಗಳು,
ವಾಸಃ ಆಲದಹಳ್ಳಿ ಗ್ರಾಮ,
ಬೀರೂರು ಹೋಬಳಿ,
ಕಡೂರು ತಾಲ್ಲೂಕು.

**ಆರೋಪಣೆ**

ಶ್ರೀಮತಿ ಸವಿತರಾಣಿ ಹೆಚ್.ವಿ., ಬಿ.ಎ.ಎಲ್., ಎಲ್.ಎಲ್.ಬಿ, 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಕಡೂರು ಆದ ನಾನು ಈ ಮೂಲಕ ಕೆಳಕಂಡಂತೆ ಆಪಾದಿತರಾದ ನಿಮ್ಮ ಮೇಲೆ ಹೊರಿಸುವ ಆರೋಪಣೆ.

ದಿನಾಂಕ 09.09.2022 ರಂದು ರಾತ್ರಿ 9.15 ಗಂಟೆ ಸಮಯದಲ್ಲಿ ಸಖರಾಯಪಟ್ಟಣ ಪೊಲಿಸ್ ಠಾಣಾ ಸರಹದ್ದಿನ ವಡೇರಹಳ್ಳಿ ತಾಂಡ್ಯದ ಸಮೀಪವಿರುವ ಹೊಸಬಾವಿಕೆರೆ ಬಳಿ ಹಾದು ಹೋಗಿರುವ ಸಖರಾಯಪಟ್ಟಣ-ಬಾಣಾವರ ನಡುವಿನ ಟಾರು ರಸ್ತೆಯಲ್ಲಿ 1 ನೇ ಆರೋಪಿಯಾದ ನೀವು ಕೆಎ.03.ಜೆಎಂ.8138 ರ ರಾಯಲ್ ಎನ್ ಫೀಲ್ಡ್ ಬೈಕಿನ ಹಿಂಬದಿ ಸೀಟಿನಲ್ಲಿ ಚಾಸಾ-11 ಚೇತನ್‌ನಾಯ್ಕ ಎಂಬುವವರನ್ನು ಕೂರಿಸಿಕೊಂಡು ಜೋಡಿಹೋಚಿಹಳ್ಳಿ ಕಡೆಯಿಂದ ಬೈಕನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬರುತ್ತಿರುವಾಗ, ಎದುರುಗಡೆಯಿಂದ ರಸ್ತೆಯ ಎಡಬದಿಯಲ್ಲಿ ಚಾಲನೆ ಮಾಡಿಕೊಂಡು ಬರುತ್ತಿದ್ದ ಚಾಸಾ-1 ಶ್ರೀ ಧರ್ಮನಾಯ್ಕರವರ ಮಗ ಶ್ರೀ ನಮಿತ್ ಎಲ್.ಡಿ ಇವರ ಬೈಕ್ ಸಂಖ್ಯೆ ಕೆಎ.45.ಕ್ಯೂ.2200 ಕ್ಕೆ

1 ನೇ ಆರೋಪಿಯಾದ ನೀವು ಡಿಕ್ಕಿ ಪಡಿಸಿ ಅಪಘಾತವನ್ನುಂಟು ಮಾಡಿದ್ದು, ಆದಕಾರಣ 1 ನೇ ಆರೋಪಿಯಾದ ನೀವು **ಭಾರತೀಯ ದಂಡ ಸಂಹಿತೆ ಕಲಂ 279** ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

ಎರಡನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ನೇ ಆರೋಪಿಯಾದ ನೀವು ಮೇಲ್ಕಂಡ ಮೋಟಾರುಸೈಕಲನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಚಾಸಾ-1 ರವರ ಮಗನ ಮೋಟಾರುಸೈಕಲ್ಲಿಗೆ ಡಿಕ್ಕಿಪಡಿಸಿದ ಪರಿಣಾಮ ಚಾಸಾ-1 ರವರ ಮಗ ಶ್ರೀ ನಮೀತ್ ಇವರ ಎದೆಗೆ, ಬಲದೇ ಕಾಲಿಗೆ, ಬಲದೇ ಕೈಗೆ ಹಾಗೂ 1 ನೇ ಆರೋಪಿಯಾದ ನಿಮ್ಮ ಬೈಕಿನ ಹಿಂಬದಿ ಸವಾರರಾದ ಚಾಸಾ-11 ರವರ ಬಲದೇ ತೊಡೆ ಹತ್ತಿರ, ಬಲದೇ ಕುಂಡಿ ಹಾಗೂ ಬಲದೇ ಕೈ ರಟ್ಟೆಗೆ ತೀವ್ರಸ್ವರೂಪದ ಗಾಯಗಳಾಗಿದ್ದು ಆದಕಾರಣ, 1 ನೇ ಆರೋಪಿಯಾದ ನೀವು **ಭಾರತೀಯ ದಂಡ ಸಂಹಿತೆ ಕಲಂ 338** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

ಮೂರನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಮೇಲ್ಕಂಡ ಮೋಟಾರುಸೈಕಲನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಚಾಸಾ-1 ರವರ ಮಗನ ಮೋಟಾರುಸೈಕಲ್ಲಿಗೆ ಡಿಕ್ಕಿ ಹೊಡೆಸಿದ ಪರಿಣಾಮ ಗಾಯಾಳು ಇವರು ಶ್ರೀ ನಮೀತ್ ಇವರಿಗೆ ತೀವ್ರ ಸ್ವರೂಪದ ರಕ್ತಗಾಯವಾಗಿದ್ದು, ನಂತರ ಮನೆಯಿಂದಲೇ ಚಿಕಿತ್ಸೆಗೆ ಕರೆದುಕೊಂಡು ಹೋಗಿ ಚಿಕ್ಕಮಗಳೂರಿನ ಕೆ.ಆರ್.ಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಕೊಡಿಸುತ್ತಿರುವಾಗ ದಿನಾಂಕ 13.10.2022 ಸಂಜೆ 7.30 ಕ್ಕೆ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದು, ಆದಕಾರಣ, 1 ನೇ ಆರೋಪಿಯಾದ ನೀವು **ಭಾರತೀಯ ದಂಡ ಸಂಹಿತೆ ಕಲಂ 304(ಎ)** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 2 ನೇ ಆರೋಪಿಯಾದ ನೀವು ಕೆಎ.45.ಕ್ಯೂ.2200 ರ ಮೋಟಾರಸೈಕಲ್ಲಿಗೆ ವಿಮೆ ಪ್ರಮಾಣ ಪತ್ರವನ್ನು ಮಾಡಿಸದೆ 1 ನೇ ಆರೋಪಿಗೆ ಚಾಲನೆ ಮಾಡಲು ನೀಡಿದ್ದು, ಆದಕಾರಣ 2 ನೇ ಆರೋಪಿಯಾದ

ನೀವು ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ 196 ರ ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಪ್ರಶ್ನೆ: 1- ನಿಮ್ಮ ಮೇಲಿನ ಆಪಾದನೆಯ ಸಾರವನ್ನು ಓದಿ ವಿವರಿಸಿ ಹೇಳಿದಾಗ ನಿಮಗೆ ಅರ್ಥವಾಯಿತೇ ?
ಉತ್ತರ:

ಪ್ರಶ್ನೆ: 2- ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ನಿಮ್ಮ ಪರ ಪ್ರತಿರಕ್ಷಣೆ ಇದೆಯೇ?
ಉತ್ತರ:

ಆದ್ದರಿಂದ ನೀವು ಮೇಲ್ಕಂಡ ದಂಡನೀಯ ಅಪರಾಧಗಳ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಒಳಪಡತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ: 09.02.2024

ಸಹಿ/-
(ಶ್ರೀಮತಿ ಸವಿತರಾಣಿ ಹೆಚ್.ವಿ)
2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಕಡೂರು.